**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**
**ಅಸಲು ದಾವಾ ಸಂಖ್ಯೆ .60/2020 , D.W.-1**

ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದ ಃ-

ಸಾಕ್ಷಿಯು ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕಾಲಂ 1 ರಲ್ಲಿ ತೋರಿಸಿದಂತೆ ನಿಶಾನೆಗೊಳಿಸಲಾಗಿದೆ.

| 1 | 2 |
|---|---|
| ನಿಡಿ-1 | ಎಸ್ ಪಿ ಎ |
| ನಿಡಿ-2 | ಒ ಎಸ್ 178/2019 ರ ವಾದ ಪತ್ರದ ದೃಢೀಕೃತ ನಕಲು |
| ನಿಡಿ-3 | ಒ ಎಸ್ 178/2019 ರ ಪ್ರತಿವಾದ ಪತ್ರದ ದೃಢೀಕೃತ ನಕಲು |
| ನಿಡಿ-4 | ಒ ಎಸ್ 178/2019 ರ issues |
| ನಿಡಿ-5 | ಒ ಎಸ್ 178/2019 ರ ಡಿಪೋಜಿಷನ್ |
| ನಿಡಿ-6 | ಸರ್ವೆ ನಂ.171/2 ರ ಕಂಪ್ಯೂಟರೀಕೃತ ಎರಡು ಆರ್ ಟಿ ಸಿಗಳನ್ನು ಒಟ್ಟಾಗಿ |
| ನಿಡಿ-7 | ಸರ್ವೆ ನಂ.171/1 ರ ಕಂಪ್ಯೂಟರೀಕೃತ ಎರಡು ಆರ್ ಟಿ ಸಿಗಳನ್ನು ಒಟ್ಟಾಗಿ |

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಬಿ ವಿ ವಕೀಲರಿಂದ ಃ-

ದಾವ ಸ್ವತ್ತಿನ ಪೂರ್ವ ದಿಕ್ಕಿಗೆ ನಮ್ಮದೇ ಜಮೀನು ಇದೆ ಎಂದರೆ ಸರಿ. ನಮ್ಮ ಜಮೀನು ಸರ್ವೆ ನಂ.171 ರಲ್ಲಿ ಇರುತ್ತದೆ. ಸರ್ವೆ ನಂ.171 ರಲ್ಲಿ 2 ಎಕರೆ 16 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ನನ್ನ ತಾಯಿ ಹಾಗೂ ನನ್ನಅಣ್ಣನ ಹೆಸರಿಗೆ ಜಂಟಿ ಖಾತೆ ಇರುತ್ತದೆ. ಅದು ನಮಗೆ ಪಿತ್ರಾರ್ಜಿತವಾಗಿ ಬಂದಿರುವ ಜಮೀನು ಆಗಿರುತ್ತದೆ. ದಾವ ಸ್ವತ್ತಿನ ಸರ್ವೆ ನಂ.172/1 ರಲ್ಲಿ 7 ಗುಂಟೆ ಯನ್ನು ಸೇರಿ ವಾದಿಯರು ಕ್ರಯಕ್ಕೆ ಕೊಂಡಿರುತ್ತಾರೆಂದರೆ ಸರಿ. ದಾವ ಆಸ್ತಿ ಸೇರಿ ಕ್ರಯಕ್ಕೆ ಕೊಂಡಿರುವ ಸ್ವತ್ತಿಗೆ ಅವರೇ ಮಾಲೀಕರು ಎಂದರೆ ಸರಿ. ದಾವ ಸ್ವತ್ತು 7 ಗುಂಟೆ ನಾಗರಾಜ್ ರವರ ಹೆಸರಿಗೆ ಇದೆ ಎಂದರೆ

ಸರಿ. ದಾವ ಸ್ವತ್ತಿನ 7 ಗುಂಟೆ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಸ್ವಾಧೀನದಲ್ಲಿರುವ ನಮ್ಮ ಸ್ವತ್ತಿನಲ್ಲಿ ನಾವು ಇರುತ್ತೇವೆ ಎಂದು ನುಡಿದಿರುತ್ತಾರೆ. ವಾದಿಯು ದಾವ ಸ್ವತ್ತನ್ನು ಅಳತೆ ಮಾಡಿಸಲು ಅರ್ಜಿ ಸಲ್ಲಿಸಿರುತ್ತಾರೆಂದರೆ ಸರಿ. ಅಳತೆ ಮಾಡುವ ಪೂರ್ವದಲ್ಲಿ ಸರ್ವೆಯರ್ ರವರಿಂದ ನಿಮ್ಮ ತಾಯಿಗೆ ನೋಟೀಸ್ ಬಂದಿದ್ದು, ಅದನ್ನು ನೀವು ಪಡೆದುಕೊಂಡಿರುತ್ತೀರಾ ಎಂದರೆ ಸರಿ. ದಿಃ 27-03-2019 ರಂದು ದಾವ ಸ್ವತ್ತನ್ನು ಅಳತೆ ಮಾಡಿರುತ್ತಾರೆಂದರೆ ಸರಿ. ಅಳತೆ ಮಾಡಿದ್ದು, ಅಳತೆ ಮಾಡುವ ಸಮಯದಲ್ಲಿ ನೀವು ದಾವ ಸ್ವತ್ತಿನ 4 ಗುಂಟೆಯನ್ನು ಒತ್ತುವರಿ ಮಾಡಿರುತ್ತೀರಾ ಎಂದು ತಿಳಿದುಬಂದಿರುತ್ತದೆ ಎಂದರೆ ಸಾಕ್ಷಿ ಅಳತೆ ಮಾಡುವಾಗ ನಮಗೆ ಕರೆದಿರುವುದಿಲ್ಲ, ನಮಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಳತೆ ಮಾಡುವ ಸಮಯದಲ್ಲಿ ನಮ್ಮನ್ನು ಕರೆದಿರುವುದಿಲ್ಲ. ಅಳತೆ ಮಾಡುವ ಸಮಯದಲ್ಲಿ ಹಾಜರಾಗಲು ನಮಗೆ ಯಾವುದೇ ತೋಂದರೆ ಇರಲಿಲ್ಲ, ಅಳತೆ ಮಾಡುವ ನಿಖರ ಸಮಯ ನಮಗೆ ತಿಳಿಸಿರುವುದಿಲ್ಲ. ಅಳತೆ ಮಾಡುವ ಸಮಯದಲ್ಲಿ ನೀವು ಹಾಜರಿದ್ದು ಹೇಳಿಕೆಗೆ ಸಹಿ ಹಾಕಲು ನಿರಾಕರಿಸಿರುತ್ತೀರಾ ಎಂದರೆ ಸರಿಯಲ್ಲ.

ನೀವು ಒತ್ತುವರಿ ಮಾಡಿರುವ 4 ಗುಂಟೆಯನ್ನು ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಒ ಎಸ್ 178/2019 ದಾವೆಯನ್ನು ಹೂಡಿರುತ್ತೀರಾ ಎಂದರೆ ಸರಿಯಲ್ಲ. ನೀವು ಒತ್ತುವರಿ ಮಾಡಿರುವ 4 ಗುಂಟೆಯನ್ನು ವಾದಿಯರಿಗೆ ಬಿಟ್ಟುಕೊಡಲು ಬಾದ್ಯಸ್ಥರಾಗಿರುತ್ತೀರಾ ಎಂದರೆ ಸಾಕ್ಷಿ ನಾವು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನೀವು 4 ಗುಂಟೆಯನ್ನು ಒತ್ತುವರಿ ಮಾಡಿದ್ದು, ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ:ಇರುವುದಿಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಸಹಿ/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು, ತರೀಕೆರೆ.